# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 264/2023

| | | |
|---|---|---|
| **ಸಾಕ್ಷಿದಾರರ ಹೆಸರು** : ಶ್ರೀಮತಿ ಗೀತಾ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** : ಶ್ರೀ ಲೋಕೇಶ್ | | **12.08.2024** |
| **ವಯಸ್ಸು** : **35** ವರ್ಷ | | |
| **ವೃತ್ತಿ** : ಗಾರೆ ಕೆಲಸ | | **ಪ್ರಾ.ಸಾ. : 01** |
| **ವಾಸಸ್ಥಳ** : ಆನಂದೂರು. | | **ಚಾ.ಸಾ. : 01** |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

. ನನ್ನ ಗಂಡನ ಹೆಸರು ಲೊಕೇಶ್. ಮೃತ ಹರ್ಷಿತ ನನ್ನ ಮಗಳಿರುತ್ತಾಳೆ. ಕೋರ್ಟ್ ಮುಂದೆ ಇರುವ ಆರೋಪಿತ ನನ್ನ ಮಗಳು ಹರ್ಷಿತಾಳ ಗಂಡನಿರುತ್ತಾನೆ. ನಾನು *16* ವರ್ಷಗಳ ವರೆಗೆ ಬೆಂಗಳೂರಿನಲ್ಲಿ ವಾಸವಿದ್ದೆ ಮತ್ತು ಆ ಕಾಲಕ್ಕೆ ನನ್ನ ಗಂಡ ಮಂಡ್ಯದ ಚಿನಕುರಳಿಯಲ್ಲಿ ವಾಸವಿದ್ದ. ನಾನು ಬೆಂಗಳೂರಿನಲ್ಲಿ ಇರುವಾಗ ನನ್ನ ಮಗಳು ಹರ್ಷಿತಾ ನನ್ನೊಂದಿಗೆ ವಾಸವಿದ್ದಳು. ಅದಕ್ಕೂ ಮೊದಲು ನನಗೂ ನನ್ನ ಗಂಡನಿಗೂ ಸರಿಯಿಲ್ಲದ್ದರಿಂದ ನಾನು ನನ್ನ ಗಂಡನನ್ನು ಬಿಟ್ಟು ಬೆಂಗಳೂರಿನಲ್ಲಿ ನನ್ನ ಮಗಳೊಂದಿಗೆ ವಾಸವಿದ್ದೆ. ಈಗ ಒಂದು ವರ್ಷದ ಹಿಂದೆ ಒಂದು ದಿನ ನನ್ನ ನಾದಿನಿ ಸುನೀತಾ ನಿನ್ನ ಅತ್ತೆಗೆ ಹುಷಾರಿಲ್ಲ ಬಾ ಎಂದು ಹೇಳಿದ್ದರಿಂದ ನಾನು ಮತ್ತು ನನ್ನ ಮಗಳು ಹರ್ಷಿತ ಚಿನಕುರಳಿಗೆ ಬಂದಿದ್ದೇವು. ಆ ಕಾಲಕ್ಕೆ *3* ದಿನ ನಾನು ಗಂಡನ ಮನೆಯಲ್ಲಿದ್ದು ವಾಪಸ್ಸು ಹೊಗುತ್ತಿರುವಾಗ ನನ್ನ ನಾದಿನಿ ಸುನೀತಾ ನಿನ್ನ

ಮಗಳನ್ನು ಇಲ್ಲಿಯೇ ಬಿಟ್ಟು ಹೊಗು ಎಂದು ಹೇಳಿದ್ದು ನಾನು ಬಿಟ್ಟು ಹೋಗಿದ್ದೆ. ಆ ನಂತರ ನನ್ನ ಮಗಳು ಫೋನ್ ಮಾಡಿದಾಗ ನನ್ನ ನಾದಿನಿ ಮತ್ತು ಅತ್ತೆ ಮಾತನಾಡಿ ನನ್ನ ನಾದಿನಿಯ ವಾರಗಿತ್ತಿಯ ಮಗನಿಗೆ ನಿನ್ನ ಮಗಳನ್ನು ಮದುವೆ ಮಾಡುತ್ತೀಯಾ ಎಂದು ಕೇಳಿದ್ದರು ಆಗ ನಾನು ನನ್ನ ಗಂಡನನ್ನು ಕೇಳುವಂತೆ ಹೇಳಿದ್ದೆ. ನಂತರ ನೀನು ಬಾ ಎಂದು ಹೇಳಿದ್ದರಿಂದ ಭಾನುವಾರದ ದಿನ ನಾನು ಪುನಃ ಚಿನಕುರಳಿಗೆ ಬಂದಿದ್ದೆ ಆ ಕಾಲಕ್ಕೆ ಹುಡುಗನನ್ನು ಮತ್ತು ಆತನ ಕಡೆಯವರನ್ನು ಕರೆಸಿದ್ದರು. ಆ ಕಾಲಕ್ಕೆ ಹುಡುಗ ಮತ್ತು ಆತನ ಭಾವಂದಿರು ಬಂದಿದ್ದರು ಮತ್ತು ನಮ್ಮನ್ನು ಮರುದಿನ ಬೆಳಗ್ಗೆ ಅವರ ಮನೆಗೆ ಬರುವಂತೆ ಕರೆದಿದ್ದರು. ಆಗ ಮರುದಿನ ನಾನು, ನನ್ನ ಮಾವ, ನಾದಿನಿ, ಮುಂತಾದವರು ಬೆರಂಬಳ್ಳಿ ಗ್ರಾಮದ ಹುಡುಗನ ಮನೆಗೆ ಅಂದರೆ ಆರೋಪಿತನ ಮನೆಗೆ ಹೋಗಿದ್ದೆವು. ಆ ಕಾಲಕ್ಕೆ ಆರೋಪಿತ ಮತ್ತು ಆತನ ತಾಯಿ ಎರಡು ತಿಂಗಳಲ್ಲಿ ಮದುವೆ ಮಾಡಿಕೊಡುವಂತೆ ಹೇಳಿದ್ದರು. ಆ ಕಾಲಕ್ಕೆ ನಾನು *3* ತಿಂಗಳು ಸಮಯ ಕೊಡುವಂತೆ ಕೇಳಿದ್ದೆ. ಆ ಕಾಲಕ್ಕೆ ಆರೋಪಿತನ ತಾಯಿ *3* ದಿನಗಳಲ್ಲಿ ಮದುವೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರು. ಆಗ ನಾನು ಆಗುವುದಿಲ್ಲ ಎಂದು ಹೇಳಿ ವಾಪಸ್ಸು ಬಂದಿದ್ದೆ. ಆ ಕಾಲಕ್ಕೆ ನನ್ನ ಅತ್ತೆ ನನ್ನೊಂದಿಗೆ ಜಗಳ ಮಾಡಿದ್ದರಿಂದ ನಾನು ನನ್ನ ಮಗಳನ್ನು ಬಿಟ್ಟು ಬೆಂಗಳೂರಿಗೆ ಹೋಗಿದ್ದೆ. ಆ ಕಾಲಕ್ಕೆ ಆರೋಪಿತನ ತಾಯಿ ನನಗೆ ಫೋನ್ ಮಾಡಿ ನೀನು ಆಗುವುದಿಲ್ಲ ಎಂದು ಹೇಳುತ್ತೀಯಾ ನಾವು ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರು. ನಂತರ ಮಂಗಳವಾರದಂದು ನನ್ನ ನಾದಿನಿ, ಹುಡುಗನ ತಾಯಿ, ಹುಡುಗನ ಭಾವ ಚಿನಕುರಳಿಗೆ ಬಂದು ನನ್ನ ಮಗಳನ್ನು ಬೆರಂಬಳ್ಳಿಗೆ ಕರೆದುಕೊಂಡು ಹೊಗುತ್ತಿದ್ದರು. ಬುದವಾರದಿಂದ ನೇರಳೆಕಟ್ಟೆಗೆ ಕರೆದುಕೊಂಡು ಹೋಗಿ ದೇವಸ್ಥಾನದಲ್ಲಿ ಮದುವೆ ಮಾಡಿದ್ದರು. ಆ ಮದುವೆಯ

ಪೋಟೋಗಳನ್ನು ನನಗೆ ಮೊಬೈಲ್ ನಲ್ಲಿ ಕಳುಹಿಸಿದ್ದರಿಂದ ಆ ಬಗ್ಗೆ ಗೊತ್ತಾಗಿತ್ತು. ಆ ಬಗ್ಗೆ ಗೊತ್ತಾದ ಬಳಿಕ ನಾನು ಪೋಲೀಸ್ ದೂರು ಕೊಡಲು ಹೋದಾಗ ನನ್ನ ಅಣ್ಣ ಬೇಡ ಎಂದು ಹೇಳಿದ್ದರಿಂದ ನಾನು ಸುಮ್ಮನಾಗಿದ್ದೆ.

2. ಮದುವೆ ಆಗಿ 4 ತಿಂಗಳ ಬಳಿಕ ಆರೋಪಿತನಿಗೆ ಕೇರಳಕ್ಕೆ ಹೋಗಿದ್ದಾಗ ಆಕ್ಸಿಡೆಂಟ್ ಆಗಿದ್ದ ಬಗ್ಗೆ ನನ್ನ ಮಗಳು ಪೋನ್ ಮೂಲಕ ತಿಳಿಸಿದ್ದರು. ಆ ಕಾಲಕ್ಕೆ ಆರೋಪಿತ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಒಂದು ತಿಂಗಳು ಚಿಕಿತ್ಸೆ ಪಡೆದಿದ್ದ. ಆ ನಂತರ ನನ್ನ ಮಗಳನ್ನು ಅವರ ಅತ್ತೆ, ಆರೋಪಿತನ ಭಾವ ಮತ್ತು ಅಕ್ಕ ನನ್ನ ಮಗಳನ್ನು ಚಿನಕುರಳಿಗೆ ಕರೆದುಕೊಂಡು ಬಂದು ಅವಳ ಗಂಡ ಹೊಡೆಯುತ್ತಾನೆ ಏನಾದರೂ ಆದರೆ ಯಾರು ಹೊಣೆ ಎಂದು ಹೇಳಿ ಅವಳನ್ನು ಬಿಟ್ಟು ಹೊಗಿದ್ದರು. ಆ ನಂತರ ಆರೋಪಿತ ನನಗೆ ಮತ್ತು ನನ್ನ ಮಗಳು ಹರ್ಷಿತಾಳಿಗೆ ದಿನಾಲೂ ಪೋನ್ ಮಾಡಿ ನನ್ನೊಂದಿಗೆ ಕಳುಹಿಸಿಕೊಡಿ ಎಂದು ಟಾರ್ಚರ್ ಕೊಡುತ್ತಿದ್ದ. ಆ ಕಾಲಕ್ಕೆ ನಾನು ಹಿರಿಯರನ್ನು ಕರೆದುಕೊಂಡು ಬಂದರೆ ಕಳುಹಿಸುತ್ತೇನೆ ಎಂದು ಹೇಳಿದ್ದೆ. ಆ ನಂತರ ಆರೋಪಿತನ ತಾಯಿ ನಮ್ಮ ಮನೆಗೆ ಬಂದು ಶಿವರಾತ್ರಿ ಹಬ್ಬಕ್ಕೆ ಕಳುಹಿಸಿಕೊಡಿ ಎಂದು ಕೇಳಿದಾಗ ನಾನು ಕಳುಹಿಸಿಕೊಟ್ಟಿದ್ದೆ. ಆ ಕಾಲಕ್ಕೆ ಆರೋಪಿತ ನನ್ನ ಮಗಳನ್ನು ಹೊಡೆದು ಬಡಿದು ಮಾಡಿದ್ದರಿಂದ ಗುಂಡ್ಲುಪೇಟೆ ಆಸ್ಪತ್ರೆಗೆ ದಾಖಲಾಗಿದ್ದಳು. ಆ ಕಾಲಕ್ಕೆ ನನ್ನ ಮಾವ ಹೋಗಿ ನನ್ನ ಮಗಳನ್ನು ಚಿನಕುರಳಿಗೆ ಕರೆದುಕೊಂಡು ಬಂದಿದ್ದ. ನಂತರ ಆರೋಪಿತನ ಅಕ್ಕ ಮತ್ತು ಭಾವ ನಮ್ಮ ಮನೆಗೆ ಬಂದು ನಮ್ಮ ಊರಿಗೆ ಕಳುಹಿಸಿಕೊಡು ಎಂದು ನನ್ನ ಮಗಳನ್ನು ನೇನಕಟ್ಟೆಗೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಆರೋಪಿತ ಅಲ್ಲಿಗೂ ಸಹ ಹೋಗಿ ನನ್ನ ಮಗಳಿಗೆ ಹೊಡೆದಿದ್ದ ಆ ಕಾಲಕ್ಕೆ ನನ್ನ ಮಗಳನ್ನು ಯಜಮಾನರ ಮನೆಯಲ್ಲಿ

ಇರಿಸಿಕೊಂಡಿದ್ದರು. ಆ ಕಾಲಕ್ಕೆ ಆರೋಪಿತನ ಭಾವ ನನ್ನ ಮಗಳನ್ನು ಪುನಃ ಕರೆದುಕೊಂಡು ಬಂದು ನನ್ನ ಮನೆಯಲ್ಲಿ ಬಿಟ್ಟಿದ್ದ. ನಾನು ನನ್ನ ಮಗಳ ಮದುವೆ ಬಳಿಕ ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ವಾಸವಿದುದ್ದರಿಂದ ನನ್ನ ಮಗಳನ್ನು ಅಲ್ಲಿಗೆ ಕರೆದುಕೊಂಡು ಬಿಟ್ಟಿದ್ದರು.

*3.* ನಂತರ ಆರೋಪಿತ ಒಂದು ಬಾರಿ ನಮ್ಮ ಮನೆಗೆ ಬಂದು ನನ್ನ ಮಗಳ ಬರ್ತ್ ಡೇ ಆಚರಣೆ ಮಾಡಿ ವಾಪಸ್ಸು ಹೋಗಿದ್ದ. ಆ ನಂತರ ಒಂದು ದಿನ ನಾನು ಮನೆಯಲ್ಲಿ ಇಲ್ಲದೇ ಇದ್ದಾಗ ಆರೋಪಿತ ನಮ್ಮ ಮನೆ ಬಳಿ ಬಂದು ಬಾಗಿಲು ಬಡಿದಿದ್ದ ಆದರೆ ನನ್ನ ಮಗಳು ಬಾಗಿಲು ತೆಗೆದಿರಲಿಲ್ಲ. ಆದಾದ ನಂತರ ಶನಿವಾರ ***9.30*** ರ ಸುಮಾರಿಗೆ ಆರೋಪಿತ ಬ್ಯಾಗ್ ನೇತು ಹಾಕಿಕೊಂಡು ನಮ್ಮ ಮನೆ ಬಳಿ ಬಂದಿದ್ದ. ಆ ಕಾಲಕ್ಕೆ ನಾನೇ ನನ್ನ ಮಗಳಿಗೆ ಹೇಳಿ ನೀರು ಮತ್ತು ಟೀ ಕೊಟ್ಟಿದ್ದೆ. ಆರೋಪಿತ ಟೀ ಕುಡಿದು ಕುಳಿತಿದ್ದ. ನಂತರ ನಾನು ಮತ್ತು ನನ್ನ ಮಗಳು ಭಾಗ್ಯಮ್ಮ ಎನ್ನುವವರ ಮನೆ ಹತ್ತಿರ ಬಟ್ಟೆ ಒಣಗಿ ಹಾಕುತ್ತಿದ್ದೇವು ಆಗ ಆರೋಪಿತ ಅಲ್ಲಿಗೆ ಬಂದಿದ್ದ. ಆಗಲೂ ಆರೋಪಿತ ನನ್ನ ಮಗಳನ್ನು ಕಳುಹಿಸಿಕೊಡುವಂತೆ ಹೇಳಿದ್ದ ಆಗಲೂ ಸಹ ನಾನು ಅಮಾವಾಸ್ಯೆ ಮುಗಿದ ಬಳಿಕ ನಿನ್ನ ತಾಯಿಯನ್ನು ಕರೆದುಕೊಂಡು ಬಾ ಕಳುಹಿಸುತ್ತೇನೆ ಎಂದು ಮನೆ ಒಳಗೆ ಹೋಗಿದ್ದೆ. ಆಗ ಆರೋಪಿತ ನನ್ನ ಹಿಂದೆಯೇ ನನ್ನ ಮನೆ ಬಳಿ ಬಂದು ನಮ್ಮ ಮನೆ ಬಳಿ ಇದ್ದ ಬೇಕರಿಗೆ ಹೋಗಿ ಏನನ್ನೋ ತೆಗೆದುಕೊಂಡು ತಿಂದು ನಾನು ಮನೆಯಿಂದ ಹೊರ ಬರುವಷ್ಟರಲ್ಲಿ ನನ್ನ ಮಗಳಿಗೆ ಚಾಕುವಿನಿಂದ ಕತ್ತು, ಎಡ ಕೈ, ಹೊಟ್ಟೆಗೆ ಚುಚ್ಚಿದ್ದ. ಆಗ ನಾನು ಮನೆಯಿಂದ ಬಂದು ನನ್ನ ಮಗಳನ್ನು ಬಿಡಿಸಿಕೊಳ್ಳಲು ಹೋದಾಗ ಚಾಕುವಿನಿಂದ ಚುಚ್ಚಿದ್ದರಿಂದ ಎರಡು ಕೈಗೆ ಗಾಯವಾಗಿತ್ತು. ನಂತರ ನನ್ನ ಮಗಳನ್ನು ಮೇಟಗಳ್ಳಿ ಆರೋಪಿಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿಂದ ಕೆ.ಆರ್ ಆಸ್ಪತ್ರೆಗೆ ಕಳುಹಿಸಿದ್ದರು. ಅದೇ ದಿನ ಮಧ್ಯಾಹ್ನ ***2.30*** ಕ್ಕೆ ನನ್ನ

ಮಗಳು ಕೆ.ಆರ್ ಆಸ್ಪತ್ರೆಯಲ್ಲಿ ಮರಣಹೊಂದಿದ್ದಳು. ನನ್ನ ಮಗಳಿಗೆ ಚಾಕುವಿನಿಂದ ಚುಚ್ಚಿದ ಬಳಿಕ ಪೋಲೀಸರು ಬರುವ ವರೆಗೆ ಅಲ್ಲಿಯೇ ಇದ್ದ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ಮದ್ಯಾಹ್ನ *12* ಗಂಟೆ ಸಮಯದಲ್ಲಿ ಆರೋಪಿತ ನನ್ನ ಮಗಳಿಗೆ ಚುಚ್ಚಿದ್ದ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ–*1* ಮತ್ತು ಸಹಿಯನ್ನು ನಿ.ಪಿ–*1(*ಎ*)* ಎಂದು ಗುರುತಿಸಿದೆ. ನನ್ನ ಮಗಳು ಹಲ್ಲೆಯಲ್ಲಿ ಗಾಯಗೊಂಡು ಚಿಕಿತ್ಸೆ ಗೆ ಕರೆದುಕೊಂಡು ಹೋಗಿದ್ದರಿಂದ ಹಲ್ಲೆ ಮಾಡಿದ ತಕ್ಷಣ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರಲಿಲ್ಲ.

*4.* ಅದೇ ದಿನ ನನ್ನ ಮಗಳು ಮರಣಹೊಂದಿದ ಬಳಿಕ *3.30* ರ ನಂತರ ಪೋಲೀಸರು ನನ್ನ ಮಗಳು ಕೊಲೆ ನಡೆದಿದ್ದ ಸ್ಥಳಕ್ಕೆ ಬಂದಿದ್ದರು. ಆ ಕಾಲಕ್ಕೆ ನಾನು ಮತ್ತು ಅಕ್ಕಪಕ್ಕದವರು ಪೋಲೀಸರಿಗೆ ಆ ಸ್ಥಳವನ್ನು ತೋರಿಸಿದ್ದೆವು. ಆ ಕಾಲಕ್ಕೆ ಆ ಘಟನೆ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆ ಮತ್ತು ಚಾಕುವನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದರು. ಆ ಕಾಲಕ್ಕೆ ಆ ಚಾಕುವನ್ನು ನಾನೇ ಪೋಲೀಸರಿಗೆ ತೋರಿಸಿದ್ದೆ. ಈಗ ನಾನು ನೋಡುತ್ತಿರುವ ಮಹಜರ್ ಆ ಕಾಲಕ್ಕೆ ಮಾಡಿದ್ದ ಮಹಜರ್ ಇರುತ್ತದೆ ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ–*2* ಮತ್ತು ಸಹಿಯನ್ನು ನಿ.ಪಿ–*2(*ಎ*)* ಎಂದು ಗುರುತಿಸಿದೆ. ಆ ಕಾಲಕ್ಕೆ ಪೊಟೋಗಳನ್ನು ತೆಗೆದಿದ್ದರು. ಈಗ ನಾನು ನೋಡುತ್ತಿರುವ ಪೊಟೋಗಳು ಅವೇ ಇರುತ್ತವೆ. ಸದರಿ ಪೊಟೋಗಳನ್ನು ನಿ.ಪಿ–*3* ರಿಂದ *7* ಎಂದು ಗುರುತಿಸಿದೆ. ನಂತರ ಆಸ್ಪತ್ರೆಯ ಶವಾಗಾರದಲ್ಲಿ ಸಹ ನನ್ನ ಮಗಳ ಶವವನ್ನು ನೊಡುವ ಕಾಲಕ್ಕೆ ಪೊಟೋಗಳನ್ನು ತೆಗೆದಿದ್ದರು. ಈಗ ನಾನು ನೋಡುತ್ತಿರುವ ಪೊಟೋಗಳು ಅವೇ ಇರುತ್ತವೆ. ಸದರಿ ಪೊಟೋಗಳನ್ನು ನಿ.ಪಿ–*8*

ಮತ್ತು *9* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ವಸ್ತುಗಳೇ ಆ ದಿನ ಪೋಲೀಸರು ವಶಕ್ಕೆ ಪಡೆದಿದ್ದ ಚಾಕು ಮತ್ತು ರಕ್ತದ ಕಲೆಗಳನ್ನು ಸಂಗ್ರಹಿಸಿದ್ದ ಹತ್ತಿಯ ತುಂಡುಗಳು ಇರುತ್ತವೆ. ಸದರಿ ವಸ್ತುಗಳನ್ನು ಎಂ.ಒ *1* ರಿಂದ *7* ಎಂದು ಗುರುತಿಸಿದೆ. ಆ ಘಟನೆ ಕಾಲಕ್ಕೆ ನನ್ನ ಮಗಳು ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಬಟ್ಟೆಗಳು ಅವೇ ಇರುತ್ತವೆ. ಸದರಿ ಬಟ್ಟೆಗಳನ್ನು ಎಂ.ಒ *8* ರಿಂದ *11* ಎಂದು ಗುರುತಿಸಿದೆ. ಆ ಘಟನೆ ಕಾಲಕ್ಕೆ ಆರೋಪಿತ ತಂದಿದ್ದ ಬ್ಯಾಗ್ ಮತ್ತು ಧರಿಸಿದ್ದ ಶರ್ಟ್ ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಬ್ಯಾಗ್ ಮತ್ತು ಶರ್ಟ್ ಅವೇ ಇರುತ್ತವೆ. ಸದರಿ ಬ್ಯಾಗ್ ಮತ್ತು ಶರ್ಟ್ ಅನ್ನು ಎಂ.ಒ *12* ಮತ್ತು *13* ಎಂದು ಗುರುತಿಸಿದೆ.

<u>ಪಾಟೀ ಸವಾಲು :</u> ಈ ವೇಳೆಗೆ ಆರೋಪಿತನ ಪರ ವಕೀಲರು ಗೈರು ಹಾಜರಿದ್ದು ಆರೋಪಿತ ಕಾನೂನು ಸೇವಾ ಪ್ರಾಧಿಕಾರ ವಕೀಲರನ್ನು ನೇಮಿಸಿ ಕೊಡುವಂತೆ ಕೇಳಿಕೊಂಡಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಗಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*